ಸುಂದರವಾಗಿಲ್ಲದಿರುವವರನ್ನು ಸಾರಾಸಗಟಾಗಿ ಎರಡನೇ ದರ್ಜೆಗೆ ತಳ್ಳುವವರ ಕುರಿತು ಅವಳ ವಿರೋಧವಿದೆ. ಅವರೂ ಅಷ್ಟೇ. 'ತಾವು ಚೆನ್ನಾಗಿಲ್ಲ' ಅನ್ನುವುದನ್ನೇ ಒಂದು ಕೊರತೆ ಎಂದು ಭಾವಿಸಿಕೊಂಡು ಕೀಳರಿಮೆ ಬೆಳೆಸಿಕೊಂಡು, ಒಂದು ಕಾಲದಲ್ಲಿ ತಾನೂ ಹಾಗೇ ಇದ್ದಿದ್ದಲ್ಲವೇ ಎಂದು ನೆನಪಿಸಿಕೊಂಡಿದ್ದಳು ಕಸ್ತೂರಿ. ಇಷ್ಟಕ್ಕೂ ರೂಪ ಅಂದರೆ ಏನು? ಅವರವರ ದೃಷ್ಟಿಕೋನ. ಚಂದ ಅನ್ನುವುದಕ್ಕೆ ಬೇರೆ ಬೇರೆ ದೇಶಗಳಲ್ಲಿ ಬೇರೆ ಬೇರೆ ಮಾನದಂಡಗಳಿರುವಾಗ 'ಇದೇ ಚಂದ' ಎಂದು ಬೆಟ್ಟು ಮಾಡಿ ತೋರಿಸುವುದೇ ಅರ್ಥವಿಲ್ಲದ್ದು. ಇಷ್ಟೆಲ್ಲಾ ಯೋಚನಾಶಕ್ತಿ ಬೆಳೆದಿರದ ವಯಸ್ಸಿನಲ್ಲಿ ಕಸ್ತೂರಿಗೆ ಮನವರಿಕೆಯಾಗಿತ್ತು, 'ತಾನು ನೋಡಲು ಚೆನ್ನಾಗಿಲ್ಲ'. ಬಾಹ್ಯದ ಕೊರತೆಯನ್ನು ಬುದ್ಧಿಶಕ್ತಿಯ ಬಲದಿಂದ ಸೋಲಿಸಿಬಿಡುತ್ತೇನೆನ್ನುವ ಛಲದಿಂದಲೆಂಬಂತೆ ಕಸ್ತೂರಿ ಓದಿನಲ್ಲಿ ಅಗ್ರಪಟ್ಟ ಕಾಯ್ದುಕೊಂಡಳು. ಬಿ.ಕಾಂ.ನಲ್ಲಿ ಮೊದಲ ರ‍್ಯಾಂಕ್ ಗಿಟ್ಟಿಸಿದರೂ ಮುಂದೆ ಓದದೆ ಬ್ಯಾಂಕಿಗೆ ಸೇರಿಕೊಂಡಳು, ಮನೆಯ ಆರ್ಥಿಕ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು.

★★★

ಅವರಿಬ್ಬರದು ಮೊದಲ ನೋಟದ ಪ್ರೇಮವೇನಲ್ಲ ಅನ್ನುವಾಗ ಮುನ್ನೆಲೆಗೆ ಬಂದು ನಿಲ್ಲುವುದು ಮತ್ತದೇ 'ಚಂದ'ದ ವಿಷಯ. ಅಂತಾದ್ದೆಲ್ಲಾ ಸಂಭವಿಸಲು ಪರಸ್ಪರ ಮೆಚ್ಚಿಕೊಳ್ಳುವ ರೂಪ ಇರಬೇಕು. ಆಕರ್ಷಣೆ ಇರಬೇಕು. ಕಸ್ತೂರಿಗೆ ಅದ್ಯಾವುದೂ ಇಲ್ಲ. ತನಗೆ ಒಪ್ಪುತ್ತದೋ, ಬಿಡುತ್ತದೋ, ಆಧುನಿಕ ವಸ್ತ್ರಭೂಷಣಗಳಿಂದ ತನ್ನನ್ನು ಅಲಂಕರಿಸಿಕೊಳ್ಳುವ ಚಪಲ ಅವಳಿಗೆ ಇಲ್ಲವೇ ಇಲ್ಲ. ಅವಳೇನಿದ್ದರೂ ಸಾದಾ, ಸರಳ. ಕೆಲಸಕಾರ್ಯಗಳಲ್ಲಿ ಬೆಟ್ಟು ತೋರಿಸದಂತಾ ನೈಪುಣ್ಯ. 'ತಾನಾಯ್ತು, ತನ್ನ ಕೆಲಸವಾಯ್ತು' ಎನ್ನುವ ಮನೋಭಾವ. ರಾಜೀವ ಅದೆಂತಾ ಮನ್ಮಥನೇ ಆಗಿರಲಿ, ಅನವಶ್ಯಕವಾಗಿ

